ತಾಲ್ಲೂಕುವಾರು ವಿವರ

		ಬಾಕಿ ಇರುವ ಅರ್ಜಿಗಳ ಸಂಖ್ಯೆ	ನೀಡಬೇಕಾದ ಹಣ
1)	ಶಿವಮೊಗ್ಗ	40	22,15,000
2)	ಭದ್ರಾವತಿ	26	6,50,000
3)	ಚಿನ್ನಗಿರಿ	1360	3,95,00,000
4)	ಹೊನ್ನಾಳಿ	63	13,50,000
5)	ಶಿಕಾರಿಪುರ	262	38,99,000
6)	ಸಾಗರ	61	14,55,000
7)	ಸೊರಬ	50	39,00,000
8)	ತೀರ್ಥಹಳ್ಳಿ	80	19,00,000
9)	ಹೊಸನಗರ	195	46,00,000

ಇ) ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಅನುದಾನ ಬಂದಲ್ಲಿ ಮಾತ್ರ ಅನುದಾನ ನೀಡಲಾಗುವುದು.

ತೀರ್ಥಹಳ್ಳಿ ಪಟ್ಟಣದಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ

600 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಪಟ್ಟಣದಲ್ಲಿ ಕೊಳಚೆ ಪ್ರದೇಶಗಳೆಂದು ಯಾವ ಯಾವ ಸ್ಥಳಗಳನ್ನು ಗುರುತಿಸಲಾಗಿದೆ?

ಆ) ಇವುಗಳ ಅಭಿವೃದ್ಧಿಗಾಗಿ ಸರ್ಕಾರವು ಖರ್ಚುಮಾಡಿದ ಹಣವೆಷ್ಟು?

ಇ) ಬಾಳೇಬೈಲು ಕೊಳಚೆ ಪ್ರದೇಶಕ್ಕೆ ಎಷ್ಟು ಹಣ ಮಂಜೂರಾಗಿದೆ ಮತ್ತು ಕಾಮಗಾರಿ ಆರಂಭಿಸಲು ವಿಳಂಬವಾಗಲು ಕಾರಣವೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ತೀರ್ಥಹಳ್ಳಿ ಪಟ್ಟಣದಲ್ಲಿ ಈ ಕೆಳಗಿನ 5 ಕೊಳಚೆ ಪ್ರದೇಶಗಳನ್ನು ಗುರುತಿಸಿ ಘೋಷಿಸಲಾಗಿದೆ.

1) ಕುರುವಳ್ಳಿ

2) ಬಾಳೆಬೈಲು

3) ಕುಶಾವತಿ ಬಡಾವಣೆ

4) ಕೋಳಿಕಾಲು ಗುಡ್ಡ

5) ಬೆಟ್ಟಮಕ್ಕಿ ಹೊಸ ಬಡಾವಣೆ

ಅ) ಕುರುವಳ್ಳಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 1996-97ನೇ ಸಾಲಿನಲ್ಲಿ 1.00 ಲಕ್ಷ ರೂ.ಗಳಿಂದ 'ಯು' ಆಕಾರದ ಚರಂಡಿ, ಜಲ್ಲಿ ರಸ್ತೆ, ಬೀದಿ ದೀಪ, ಕಾಮಗಾರಿಗಳನ್ನು ಕೈಗೊಂಡಿದ್ದು ಪೂರ್ಣಗೊಳಿಸಲಾಗಿದೆ ಹಾಗೂ 1997-98ನೇ ಸಾಲಿನಲ್ಲಿ 1.00 ಲಕ್ಷ ರೂಗಳಿಂದ ಮಳೆ ನೀರಿನ ಚರಂಡಿ ಕೆಲಸ ತೆಗೆದುಕೊಂಡಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ ಕೊಳಚೆ ಪ್ರದೇಶಗಳು ಈಗಷ್ಟೆ ತಾನೆ ಘೋಷಣೆಯಾಗಿರುತ್ತದೆ.

ಇ) ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಈ ಕೊಳಚೆ ಪ್ರದೇಶಕ್ಕೆ 1997-98ನೇ ಸಾಲಿನಲ್ಲಿ 6.75 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಸಮುದಾಯ ಭವನ ಹಾಗೂ ಮಳೆನೀರಿನ ಚರಂಡಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿದೆ. ಈ ಕೊಳಚೆ ಪ್ರದೇಶವು ಇತ್ತೀಚೆಗಷ್ಟೆ ಘೋಷಣೆಯಾದುದರಿಂದ ಕಾಮಗಾರಿ ಪ್ರಾರಂಭಿಸಲು ವಿಳಂಬವಾಯಿತು.

ಮಾಗಡಿ ಕ್ಷೇತ್ರದಲ್ಲಿ ಅನಧಿಕೃತ ಕ್ರಷರ್‌ಗಳ ಬಗ್ಗೆ

602 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು? ಯಾವುವು? (ಕ್ರಷರ್‌ಗಳು ನಡೆಯುತ್ತಿರುವ ಸ್ಥಳ, ನಡೆಸುತ್ತಿರುವವರ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

ಆ) ಇವುಗಳಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು? ಯಾವುವು? (ಪೂರ್ಣ ವಿವರ ನೀಡುವುದು)

ಇ) ಈ ಅನಧಿಕೃತ ಕ್ರಷರ್‌ಗಳಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಪ್ರಮಾಣವೆಷ್ಟು? ಇವುಗಳನ್ನು ನಿಲ್ಲಿಸಲು ಸರ್ಕಾರದ ಕ್ರಮವೇನು?

ಈ) ಈ ಕ್ರಷರ್‌ಗಳಿಂದ ಭಾರೀ ಮೊತ್ತದ ವಿದ್ಯುತ್ ಶುಲ್ಕದ ಬಾಕಿ ಬರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇದರ ಒಟ್ಟು ಮೊತ್ತವೆಷ್ಟು?

ಊ) ಈ ಶುಲ್ಕವನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?